ಅ) *ಮುಧೋಳ್ ತಾಲ್ಲೂಕಿನಲ್ಲಿ ರೈತರು ತಾವು ಬೆಳೆದ ಕಬ್ಬನ್ನು ಬೇರೆ ಬೇರೆ ಕಾರ್ಖಾನೆಗಳಿಗೆ ಕಳುಹಿಸುವಾಗ ರೈತರ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ ಹಾಗೂ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಪಿ.ಸಿ. ಸಿದ್ಧನಗೌಡರ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ , ಪರಿಸರ ಮತ್ತು ಜೀವಶಾಸ್ತ್ರ ರಾಜ್ಯ ಸಚಿವರು) :

ಅ) ಬಂದಿದೆ. ಸರ್ಕಾರವು ಮನವಿಯನ್ನು ಪರಿಗಣಿಸಿ ಸಿಐ 161 ಎಸಜಿಎಫ್ 94 ದಿನಾಂಕ 3.2.95 ಹಾಗೂ 16.3.95ರ ಮೇರೆಗೆ ವಿಜಾಪುರ ಜಿಲ್ಲೆಯಿಂದ ಹೊರರಾಜ್ಯಕ್ಕೆ ಕಬ್ಬು ಸಾಗಾಣಿಕೆ ಮಾಡಲು ಅನುಮತಿ ನೀಡಿದೆ.

ಆ) ಬಂದಿರುವುದಿಲ್ಲ. ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿನ ಉಪಜಾತಿಗಳು

2060 - ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯಗಳ ಪುನರವಿಂಗಡಣೆಯಾದ ನಂತರ (1956ರಲ್ಲಿ) ರಾಜ್ಯದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಲ್ಲಿದ್ದ ಉಪಜಾತಿಗಳ ಸಂಖ್ಯೆ ಎಷ್ಟು;*

ಆ) *ರಾಜ್ಯದಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಜನಾಂಗದವರ ಸಂಖ್ಯೆ ಎಷ್ಟು (ಶೇಕಡವಾರು);*

ಇ) *1995ರಲ್ಲಿ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ್ ಜನಾಂಗಗಳಲಿದ್ದ ಉಪಜಾತಿಗಳ ಸಂಖ್ಯೆ ಎಷ್ಟು?*

ಈ) *ರಾಜ್ಯದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಜನಾಂಗದವರ ಸಂಖ್ಯೆ ಎಷ್ಟು (ಶೇಕಡವಾರು)*

ಉ) *ಹೆಚ್ಚಾಗಿದ್ದರೆ ಕಾರಣವೇನು;*

ಊ) *ಜನಸಂಖ್ಯೆಯ ಆಧಾರದ ಮೇಲೆ ಮೀಸಲಾತಿಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮವೇನು;*

ಋ) *ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ಪಟ್ಟಿಯಲ್ಲಿ ಸಂವಿಧಾನ ವ್ಯಾಪ್ತಿಯಲ್ಲಿ ಇರದ ಉಪಜಾತಿಗಳನ್ನು ಸೇರಿಸಿರುವುದು ಉಚಿತವೇ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ರಾಜ್ಯಗಳ ಪುನರ್ ವಿಂಗಡೆಣೆಯ ನಂತರ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಪಟ್ಟಿಯ ಪ್ರಕಾರ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ 101 ಜಾತಿಗಳನ್ನು ಹಾಗೂ ಪರಿಶಿಷ್ಟ

ಪಂಗಡದ ಪಟ್ಟಿಯಲ್ಲಿ 49 ಜಾತಿಗಳು ಸೇರಲ್ಪಟ್ಟಿವೆ.

ಕ್ರ.ಸಂ.	ಜಾತಿ	ಜನಗಣತಿ ವರದಿ	ಜನಸಂಖ್ಯೆ	ಶೇಕಡವಾರು
1	ಪರಿಶಿಷ್ಟ ಜಾತಿ	1981	55.95 ಲಕ್ಷ	15.07
2	ಪರಿಶಿಷ್ಟ ಜಾತಿ	1991	73.69 ಲಕ್ಷ	16.38
3	ಪರಿಶಿಷ್ಟ ವರ್ಗ	1981	18.25 ಲಕ್ಷ	4.91
4	ಪರಿಶಿಷ್ಟ ವರ್ಗ	1991	19.15 ಲಕ್ಷ	4.26

ಇ) ಪರಿಶಿಷ್ಟ ಜಾತಿ - 101
ಪರಿಶಿಷ್ಟ ವರ್ಗ - 49

ಕೇಂದ್ರ ಸರ್ಕಾರವು ದಿನಾಂಕ : 5.10.79ರಲ್ಲಿ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿನ ಕ್ರಮ ಸಂ: 17,23,53 ಹಾಗೂ 54 ರಲ್ಲಿನ ಜಾತಿಗಳ ಜೊತೆಗೆ 13 ಸಮಾನಾಂತರ ಪಡೆದ ಜಾತಿಯನ್ನು ಸೇರಿಸಿದೆ.

ದಿನಾಂಕ : 19.4.91ರಲ್ಲಿ ಪರಿಶಿಷ್ಟ ವರ್ಗದ ಕ್ರಮ ಸಂ: 38ರಲ್ಲಿನ ಜಾತಿಯ ಜೊತೆಗೆ 5 ಜಾತಿಗಳನ್ನು ಕೇಂದ್ರ ಸರ್ಕಾರವು ಸೇರಿಸಿದೆ.

ಈ) ಉತ್ತರವನ್ನು ಮೇಲಿನ ಪ್ರಶ್ನೆಯ ಕ್ರಮ ಸಂಖ್ಯೆ (ಅ)ನಲ್ಲಿ ಒದಗಿಸಿದೆ.

ಉ) ಕೆಲವೊಂದು ಜಾತಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸಮಾನಾಂತರ ಪದಗಳೆಂದು ಪರಿಗಣಿಸಿರುವದರಿಂದ, ಸದರೀ ಜನಾಂಗದ ಜನಸಂಖ್ಯೆಯು ಹೆಚ್ಚಾಗಿರುವ ಸಾಧ್ಯತೆ ಇರುತ್ತದೆ.

ಊ) ಸರ್ಕಾರಿ ಆದೇಶ ಸಂ: ಎಸಡಬ್ಲ್ಯೂಡಿ 180 ಎಸ್‌ಎಡಿ 94 ದಿನಾಂಕ : 20.4.94 ರಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದ ಮೀಸಲಾತಿಯನ್ನು ಶೇಕಡ 15 ಮತ್ತು ಶೇಕಡ 3 ರಿಂದ ಶೇಕಡ 18 ಮತ್ತು ಶೇಕಡ 5ಕ್ಕೆ ಹೆಚ್ಚಿಸ ಆದೇಶ ಹೊರಡಿಸಿತ್ತು. ಆದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಮೀಸಲಾತಿಯನ್ನು ಪರಿಶಿಷ್ಟ ಜಾತಿ:ವರ್ಗ ಮತ್ತು ಇತರೆ ಹಿಂದುಳಿದ ವರ್ಗದವರಿಗೆ ಶೇಕಡ 50ಕ್ಕೆ ನಿಗದಿಪಡಿಸಿ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದವರಿಗೆ ಮೊದಲಿನಂತೆ ಶೇಕಡ 15 ಮತ್ತು ಶೇಕಡ 3 ಕಾದಿರಿಸಿ, ಸರ್ಕಾರವು ಆದೇಶ ಹೊರಡಿಸಿರುತ್ತದೆ. (ಸರ್ಕಾರಿ ಆದೇಶ ಸಂಖ್ಯೆ : ಎಸಡಬ್ಲ್ಯೂಡಿ 150 ಬಿಸಿಎ 94 ದಿನಾಂಕ : 17.9.94).

ಋ) ಯಾವುದೇ ಜಾತಿ: ಉಪಜಾತಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.